ಮಾಡುತ್ತೇನೆ, ಈ ವರ್ಷ ನಾನು ಇದಕ್ಕೆ ವಿಶೇಷವಾದ ಗಮನವನ್ನು ಕೊಡುತ್ತೇನೆ.

ಗ್ರಾಮದಲ್ಲಿ ಸ್ಮಶಾನ ಭೂಮಿಗೆ ಜಮೀನನ್ನು ಕಾಯ್ದಿರಿಸುವುದು

5 (42) ಶ್ರೀ ಪ್ರಭಾಕರ ಬಂಗೇರ ಕೆ.(ಬೆಳ್ತಂಗಡಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದ ಪ್ರತಿ ತಾಲ್ಲೂಕಿನ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಸ್ಮಶಾನಕ್ಕಾಗಿ ಜಮೀನನ್ನು ಕಾಯ್ದಿರಿಸಲಾಗಿದೆಯೇ;

ಆ) ಇನ್ನೂ ಎಷ್ಟು ಗ್ರಾಮ ಪಂಚಾಯತ್ ಗಳಿಗೆ ಸ್ಮ ಶಾನ ಭೂಮಿಯನ್ನು ಕಾಯ್ದಿರಿಸಲು ಬಾಕಿ ಇದೆ; ಈ ಸಂಬಂಧ ಸರ್ಕಾರ ಕೈಗೊಳ್ಳಲಾಗಿರುವ ಸಕಾಲಿಕ ಕ್ರಮಗಳೇನು;

ಇ) ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಹಲವಾರು ಊರುಗಳಲ್ಲಿ ಜನಸಂಖ್ಯೆ ಗಣನೀಯ ಪ್ರಮಾಣದಲ್ಲಿದ್ದು, ಈ ಗ್ರಾಮ ಪಂಚಾಯತ್ ವ್ಯಾಪ್ತಿಯ ಒಂದು ಸ್ಥಳದಲ್ಲಿ ಮಾತ್ರ ಸ್ಮಶಾನ ಭೂಮಿ ವ್ಯವಸ್ಥೆಗೊಳಿಸುವ ಕಾರಣದಿಂದ ಸದರಿ ಗ್ರಾಮದ ದೂರದಲ್ಲಿರುವ ಊರುಗಳ ಜನರು ಈ ಸೌಲಭ್ಯವನ್ನು ಹೊಂದುವಲ್ಲಿ ಅನಾನುಕೂಲ ಉಂಟಾಗುತ್ತಿರುವುದನ್ನು ಸರ್ಕಾರ ಗಮನಿಸಿದೆಯೇ;?

ಈ) ಹೌದಾದಲ್ಲಿ ಅಂಥ ಎಲ್ಲಾ ಊರುಗಳಲ್ಲಿಯೂ ಸ್ಮಶಾನ ಭೂಮಿ ಕಾಯ್ದಿರಿಸಲು ಸರ್ಕಾರ ಕ್ರಮ ಕೈಗೊಳ್ಳವುದೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ರಾಜ್ಯದ ಪ್ರತಿ ತಾಲ್ಲೂಕಿನ ಗ್ರಾಮ ಪಂಚಾಯತ್‌ಗಳ ವ್ಯಾಪ್ತಿಯಲ್ಲಿ ಸ್ಮಶಾನಕ್ಕಾಗಿ ಜಮೀನನ್ನು ಕಾಯ್ದಿರಿಸಲಾಗುತ್ತದೆ.

ಬೆಂಗಳೂರು ವಿಭಾಗಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆ ಹಾಗೂ ತುಮಕೂರು ಜಿಲ್ಲೆಗಳಲ್ಲಿ ಕೆಲವು ಗ್ರಾಮ ಪಂಚಾಯಿತಿಗಳಲ್ಲಿ ಜಮೀನನ್ನು ಕಾಯ್ದಿರಿಸಬೇಕಾಗುತ್ತದೆ. ಉಳಿದ ಕೋಲಾರ, ಚಿತ್ರದುರ್ಗ, ಬೆಂಗಳೂರು ನಗರ ಜಿಲ್ಲೆಗಳಲ್ಲಿ ಸೇರಿದಂತೆ 1138 ಗ್ರಾಮಗಳಲ್ಲಿ ಸ್ಮಶಾನಕ್ಕೆ ಜಮೀನನ್ನು ಕಾಯ್ದಿರಿಸಲಾಗಿದೆ.

ಬೆಳಗಾವಿ ವಿಭಾಗಕ್ಕೆ ಸಂಬಂಧಿಸಿದಂತೆ ಆಯಾ ಗ್ರಾಮ ಪಂಚಾಯಿತಿಗಳಲ್ಲಿ ಲಭ್ಯವಿರುವ ಸರ್ಕಾರಿ ಜಮೀನಿನ ಲಭ್ಯತೆಗೆ ಅನುಗುಣವಾಗಿ ಜಮೀನನ್ನು ಸ್ಮಶಾನಕ್ಕಾಗಿ ಕಾಯ್ದಿರಿಸಲಾಗುತ್ತಿದೆ. ಬೆಳಗಾವಿ ಜಿಲ್ಲೆಯಲ್ಲಿ 776 ಗ್ರಾಮಗಳಿಗೆ ಸ್ಮಶಾನ ಜಾಗವನ್ನು ಕಾಯ್ದಿರಿಸಲಾಗಿದೆ.

ಮೈಸೂರು ವಿಭಾಗದಲ್ಲಿ 2274 ಗ್ರಾಮಗಳಿಗೆ ಸ್ಮಶಾನಕ್ಕಾಗಿ ಜಮೀನನ್ನು ಕಾಯ್ದಿರಿಸಲಾಗಿದೆ.

ಗುಲ್ಬರ್ಗಾ ವಿಭಾಗದ 2210 ಗ್ರಾಮಗಳಿಗೆ ಸ್ಮಶಾನಕ್ಕಾಗಿ ಜಮೀನನ್ನು ಕಾಯ್ದಿರಿಸಲಾಗಿದೆ.

ಆ) ಬೆಳಗಾವಿ ವಿಭಾಗದಲ್ಲಿ 820 ಗ್ರಾಮಗಳಿಗೆ, ಬೆಂಗಳೂರು ವಿಭಾಗದಲ್ಲಿ 1875 ಗ್ರಾಮಗಳಿಗೆ, ಮೈಸೂರು ವಿಭಾಗದಲ್ಲಿ–742 ಗ್ರಾಮಗಳಿಗೆ ಹಾಗೂ ಗುಲ್ಬರ್ಗಾ ವಿಭಾಗದ 939 ಗ್ರಾಮಗಳಿಗೆ ಸ್ಮಶಾನಕ್ಕಾಗಿ ಜಮೀನನ್ನು ಕಾಯ್ದಿರಿಸಲು ಬಾಕಿ ಇದೆ.

ಈ ಸಂಬಂಧ ಸರ್ಕಾರದ ಸುತ್ತೋಲೆ ಸಂಖ್ಯೆ ಕಂ.ಇ. 14 ಭೂಸ್ವಾ 02, ದಿನಾಂಕ: 28.5.2002ರ ಪ್ರಕಾರ ಒಂದು ಸಾವಿರ ಜನಸಂಖ್ಯೆಗೆ 20 ಗುಂಟೆಯಂತೆ 2ಕಿ.ಮೀ ವ್ಯಾಪ್ತಿಯೊಳಗೆ ಸ್ಮಶಾನಕ್ಕಾಗಿ ಜಮೀನನ್ನು ಕಾಯ್ದಿರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಗ್ರಾಮ ಪಂಚಾಯಿತಿಯ ಒಂದು ಸ್ಥಳದಲ್ಲಿ ಮಾತ್ರವಲ್ಲದೆ ಅಗತ್ಯವಿರುವ ಎಲ್ಲಾ ಗ್ರಾಮಗಳಿಗೂ ಸ್ಮಶಾನ ಸೌಲಭ್ಯ ಕಲ್ಪಿಸಲು ಕ್ರಮವಹಿಸಲಾಗುತ್ತಿದೆ. ಆದುದರಿಂದ ಈ ರೀತಿಯ ಅನಾನುಕೂಲ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ) ಸೂಕ್ತ ಜಮೀನು ಲಭ್ಯವಿಲ್ಲದ ಗ್ರಾಮಗಳಿಗೆ ಸುತ್ತೋಲೆ ಸಂಖ್ಯೆ ಕಂ.ಇ. 14 ಭೂಸ್ವಾ 02, ದಿನಾಂಕ: 28.5.2002ರ ಪ್ರಕಾರ ಸ್ಮಶಾನಕ್ಕಾಗಿ ಜಮೀನನ್ನು ಕಾಯ್ದಿರಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಆ) ತಡೆ ಹಿಡಿಯಲಾದ ಚುಕ್ಕೆ ಗುರುತಿನ ಪ್ರಶ್ನೆಗಳು

ಪ್ರಶ್ನೆ ಸಂಖ್ಯೆ: 5(42)

ಶ್ರೀ ಕೆ.ಪ್ರಭಾಕರ ಬಂಗೇರ : ಮಾನ್ಯ ಉಪಾಧ್ಯಕ್ಷರೆ, ಸರ್ಕಾರದವರು ಉತ್ತರವನ್ನು ಕೊಟ್ಟಿದ್ದಾರೆ. ಸ್ಮಶಾನಗಳು ಇಲ್ಲದೇ ಇರುವ ಜಾಗದಲ್ಲಿ ಜಮೀನನ್ನು ಕಾಯ್ದಿರಿಸುವ ಕೆಲಸ ಕಾರ್ಯಗಳನ್ನು ಮಾಡುತ್ತೇವೆಂದು ಹೇಳಿದ್ದಾರೆ. ಒಂದು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಎಲ್ಲೆಲ್ಲಿ ಜನಸಂಖ್ಯೆ ಹೆಚ್ಚಿಗೆ ಇದೆ. ಅಲ್ಲಿಯೂ ಕೂಡ ಮಾಡುತ್ತೇವೆಂಬ ವಿಚಾರವನ್ನು ಹೇಳಿದ್ದಾರೆ. ಆದರೆ ಅನಾನುಕೂಲವಾದ ವರದಿಯಾಗಿಲ್ಲವೆಂದು ಹೇಳಿದ್ದಾರೆ. ಆದಷ್ಟು ಶೀಘ್ರವಾಗಿ ನಾವು ಕೇಳಿರುವಂಥಾ ಜಾಗದಲ್ಲಿ ಸ್ಮಶಾನವನ್ನು ಒದಗಿಸಿ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದರ ಜೊತೆಗೆ ಭೂ ಸ್ವಾಧೀನ ಮಾಡಿಕೊಂಡು ಜಮೀನನ್ನು ಕೊಡುತ್ತೇವೆಂಬ ಮಾತನ್ನು ಸರ್ಕಾರ ಹೇಳಿದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಸ್ಮಶಾನ ಭೂಮಿಯ ಬಗ್ಗೆ ಏನು ಪ್ರಶ್ನೆಯನ್ನು ಕೇಳಿದ್ದಾರೆ. ಈಗಾಗಲೇ ಎಲ್ಲೆಲ್ಲಿ ಅವಶ್ಯಕತೆ ಇದೆಯೆಂಬುದನ್ನು ನೋಡಿಕೊಂಡು, ಮತ್ತು ಸರ್ಕಾರದ ಜಮೀನು ಎಲ್ಲಿ ಇದೆ. ಅಲ್ಲಿ ಸ್ಮಶಾನದ ಸಲುವಾಗಿ ಕೆಲವೊಂದು ಸ್ಥಳಗಳನ್ನು ನಾವು ನಿಗದಿ ಮಾಡಿ

ಇಟ್ಟಿದ್ದೇವೆ, ಮತ್ತು ಎಲ್ಲಿ ಸರ್ಕಾರದ ಜಮೀನು ಇಲ್ಲ. ಅಂಥಾ ಕಡೆಗಳಲ್ಲಿ ಖಾಸಗಿ ಜಮೀನುಗಳನ್ನು ಖರೀದಿ ಮಾಡುವ ಮುಖಾಂತರವಾಗಲಿ, ಅಥವಾ ಭೂ ಸ್ವಾಧೀನದ ಮುಖಾಂತರ ಜಮೀನನ್ನು ಖರೀದಿ ಮಾಡಿ, ಆ ಗ್ರಾಮಕ್ಕೆ ಸ್ಮಶಾನದ ಸೌಲಭ್ಯವನ್ನು ಒದಗಿಸುವುದಕ್ಕೆ ನಾವು ನಿರ್ಣಯವನು ಕೈಗೊಂಡಿದ್ದೇವೆ.

ಶ್ರೀ ಎಸ್.ರಾಜೇಂದ್ರನ್ : ಮಾನ್ಯ ಉಪಾಧ್ಯಕ್ಷರೆ, ಈ ಸ್ಮಶಾನದ ವಿಚಾರವಾಗಿ ತಾವು ಪತ್ರಿಕೆಗಳಲ್ಲಿ ಓದಿರಬಹುದು. ನಮ್ಮ ಕ್ಷೇತ್ರದಲ್ಲಿ ಸ್ಮಶಾನವನ್ನು D.C.Office ನವರೆ ಕೊಟ್ಟಿದ್ದಾರೆ. freedom fighter ಗೆ ಸ್ಮಶಾನ ಜಾಗವನ್ನು ಕೊಟ್ಟಿದ್ದಾರೆ. ಇಲ್ಲಿ ಮುಸ್ಲಿಮರು ಏನು ಮಾಡಿದ್ದಾರೆಂದರೆ, ಇದು ನಮಗೆ ಸೇರಿದ್ದು, ಅವರಿಗೆ ಹೇಗೆ ಕೊಟ್ಟಿದ್ದೀರೆಂದು ದೊಡ್ಡ ಗಲಾಟೆಯಾಗಿ, ಕೇಸ್ ಆಗಿ, law and order problem ಬರುವ ಸ್ಥಿತಿಗೆ ಹೋಗಿ, ತಹಶೀಲ್ದಾರರೆಲ್ಲಾ ಹೋಗಿ, ಅದನ್ನು ಸರ್ಕಾರಕ್ಕೆ ತಿಳಿಸಿದ್ದಾರೆ. ಅದರ ಬಗ್ಗೆ ಸರ್ಕಾರ ತಕ್ಷಣ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಉಪಾಧ್ಯಕ್ಷರೆ, ಇದು ಸ್ಮಶಾನದ ಜಾಗವಿದ್ದರೆ, ಅದನ್ನು ಅದಕ್ಕೆ ಇಡುವ ವ್ಯವಸ್ಥೆಯನ್ನು ನಾವು ಮಾಡುತ್ತೇವೆ. ಅಲ್ಲಿ ಯಾರಾದರೂ ಅತಿಕ್ರಮಣ ಮಾಡಿದ್ದರೆ, ಅದನ್ನು ತೆರವುಗೊಳಿಸುವಂಥಾ ಕೆಲಸವನ್ನು ಮಾಡುತ್ತೇವೆ. ತಾವು ಅದರ ಡಿಟೈಲ್ಸ್ ಕೊಟ್ಟರೆ....

ಶ್ರೀ ಜಗದೀಶ್ ಶೆಟ್ಟರ್ : ಸ್ಮಶಾನ ಜಾಗವನ್ನು ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಟ್ಟಿದ್ದಾರೆಂದು ತಾವು ಹೇಳಿದ್ದೀರಿ. ನಾನು ಆ ಕಡತವನ್ನು ತರಿಸಿ, ಅದನ್ನು ಯಾವ ರೀತಿಯಲ್ಲಿ ಕೊಟ್ಟಿದ್ದಾರೆ, ಯಾವ ಹಿನ್ನಲೆಯಲ್ಲಿ ಕೊಟ್ಟಿದ್ದಾರೆಂಬುದನ್ನು ಪರಿಶೀಲನೆ ಮಾಡಿಕೊಂಡು, ಅದಕ್ಕೆ ಸರಿಯಾದ ಕ್ರಮವನ್ನು ಕೈಗೊಳ್ಳುತ್ತೇನೆ.

ಹೊಸ ಕೆರೆಗಳ ನಿರ್ಮಾಣ

6 (54) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬೀದರ ಜಿಲ್ಲೆಯ ವಿವಿಧ ವಿಧಾನ ಸಭಾ ಕ್ಷೇತ್ರಗಳ ಯಾವ ಯಾವ ಗ್ರಾಮಗಳಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಹೊಸ ಕೆರೆಗಳನ್ನು ನಿರ್ಮಿಸಲು ಸರ್ವೆ ಮಾಡಲಾಗಿದೆ. ಈ ಸರ್ವೆಯನ್ನು ಯಾವಾಗ ಕೈಗೊಳ್ಳಲಾಯಿತು;

ಆ) ಈ ಪೈಕಿ ಇಲ್ಲಿಯವರೆಗೆ ಎಷ್ಟು ಕೆರೆಗಳ ಕಾಮಗಾರಿ ಪ್ರಗತಿಯಲ್ಲಿದೆ; (ಗ್ರಾಮವಾರು ವಿವರಗಳನ್ನು ಒದಗಿಸುವುದು).

ಇ) ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಹೊಸ ಕೆರೆಗಳನ್ನು ನಿರ್ಮಿಸಲಾಗುವುದು, ಇವುಗಳಿಂದ ಎಷ್ಟು ಎಕರೆ ಜಮೀನಿಗೆ ನೀರಾವರಿ ಮತ್ತು ಎಷ್ಟು ಜನ ಸಂಖ್ಯೆಗೆ ಕುಡಿಯುವ ನೀರಿನ ಸೌಲಭ್ಯ ದೊರೆಯುತ್ತದೆ;